KATK900005432025

# 5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
# ತಿಪಟೂರು.

**ಎಸ್.ಸಿ ಸಂಖ್ಯೆ: 10030/2025**

**ಪ್ರಮಾಣೀಕರಿಸಿದ ದಿನಾಂಕಃ 02.07.2026.**

**ಚಾಸಾ.1**

**ಫ್ರಾಸಾ.2**

| | |
|---|---|
| ಹೆಸರು | ಸಿದ್ದೀಕ್ |
| ತಂದೆಯ ಹೆಸರು | ಅಸ್ಲಾಂ ಪಾಶ |
| ವಯಸ್ಸು | 29 ವರ್ಷ |
| ಉದ್ಯೋಗ | ವ್ಯಾಪಾರ |
| ವಾಸಸ್ಥಳ | ಗಾಂಧೀನಗರ, ತಿಪಟೂರು |

**ಮುಖ್ಯವಿಚಾರಣೆ, ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ಆರೋಪಿ 1 ನನ್ನ ಸ್ನೇಹಿತನಿರುತ್ತಾನೆ. ನನ್ನ ಹಾಗೂ ಆರೋಪಿತನ ನಡುವೆ ಯಾವುದೇ ವ್ಯವಹಾರ ಇರಲಿಲ್ಲ. ನನ್ನ ಮಗನಿಗೆ ಹುಷಾರಿಲ್ಲದ ಕಾರಣ ನಾನು 1 ನೇ ಆರೋಪಿಯ ಬಳಿ ಎರಡು ವರ್ಷಗಳ ಹಿಂದೆ 25 ಸಾವಿರ ರೂಪಾಯಿಗಳನ್ನು ಸಾಲವಾಗಿ ಪಡೆದುಕೊಂಡಿದ್ದೆನು. ಸದರಿ ಹಣ ಕೊಡುವಷ್ಟರಲ್ಲಿ ಗಲಾಟೆಯಾಗಿರುತ್ತದೆ. ಸದರಿ ಗಲಾಟೆಯ ಸಮಯದಲ್ಲಿ ಸುಮಾರು 50 ಜನ ಸೇರಿಕೊಂಡಿದ್ದು, ನನ್ನ ಮೇಲೆ

ಯಾರು ಹಲ್ಲೆ ಮಾಡಿರುತ್ತಾರೆಂದು ನನಗೆ ತಿಳಿದಿರುವುದಿಲ್ಲ. ಸದರಿ ಸ್ಥಳದಲ್ಲಿ ಆರೋಪಿತರು ಹಾಜರಿದ್ದ ಬಗ್ಗೆ ಹಾಗೂ ಹಲ್ಲೆ ಮಾಡಿದ ಬಗ್ಗೆ ನನಗೆ ನಿಖರವಾಗಿ ತಿಳಿದಿರುವುದಿಲ್ಲ. ನನ್ನನ್ನು ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಿರುತ್ತಾರೆ, ಯಾರು ದಾಖಲಿಸಿರುತ್ತಾರೆಂದು ನನಗೆ ತಿಳಿದಿರುವುದಿಲ್ಲ. ಸದರಿ ನ್ಯಾಯಾಲಯದ ಮುಂದಿರುವ ಆರೋಪಿತರು ನನ್ನ ಮೇಲೆ ಯಾವುದೇ ವಸ್ತುಗಳಿಂದ ಹಾಗೂ ಯಾವುದೇ ತರಹದ ಹಲ್ಲೆ ಮಾಡಿರುವುದಿಲ್ಲ ಹಾಗೂ ನನಗೆ ಅವಾಚ್ಯ ಶಬ್ದಗಳಿಂದ ಬೈದಿ ನಿಂದಿಸಿರುವುದಿಲ್ಲ.

ನನಗೆ ಸದರಿ ಗಲಾಟೆಯಲ್ಲಿ ಯಾವುದೇ ಪೆಟ್ಟು ಆಗಿರುವುದಿಲ್ಲ. ನನಗೆ ತಲೆಗೆ ಆದ ಪೆಟ್ಟಿಗೆ ಸಂಬಂಧಿಸಿದಂತೆ ಚಿಕಿತ್ಸೆ ಪಡೆದಿದ್ದು, ಸದರಿ ಪೆಟ್ಟು ಬೇರೆಲ್ಲೋ ಆಗಿರುತ್ತದೆ. ಸಾಕ್ಷಿಯು ಮೂರು ದಾಖಲಾತಿಗಳಲ್ಲಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಸದರಿ ದಾಖಲಾತಿಗಳನ್ನು **ನಿ.ಪಿ–3 ರಿಂದ ನಿ.ಪಿ–5** ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಪಿ–3(ಎ) ರಿಂದ ನಿ.ಪಿ–5(ಎ) ಎಂದು ಗುರುತಿಸಲಾಯಿತು. ಸದರಿ ದಾಖಲಾತಿಗಳಲ್ಲಿ ಸಹಿಗಳನ್ನು ಮಾಡಿರುವುದನ್ನು ಹೊರತುಪಡಿಸಿ ಅದರಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ತಿಳಿದಿರುವುದಿಲ್ಲ. ಪೊಲೀಸರು ಸಹಿ ಮಾಡಲು ಹೇಳಿದ್ದು, ನಾನು ಸಹಿ ಮಾಡಿರುತ್ತೇನೆ. ನಾನು ದಾಖಲಾತಿಗಳಿಗೆ ತಿಪಟೂರು ಸರ್ಕಾರಿ ಆಸ್ಪತ್ರೆಯಲ್ಲಿ ಸಹಿ ಮಾಡಿರುತ್ತೇನೆ. ನಾನು ಸದರಿ ದಾಖಲಾತಿಗಳಿಗೆ ಓದಿ, ತಿಳಿದುಕೊಂಡು ಸಹಿ ಮಾಡಿರುವುದಿಲ್ಲ. ನ್ಯಾಯಾಲಯದ ಮುಂದಿರುವ ಮುದ್ದೆಮಾಲು–1 ಹಾಗೂ ಮತ್ತೊಂದು ದೊಣ್ಣೆಯನ್ನು ನೋಡಿ ಸಾಕ್ಷಿ ಗುರುತಿಸಿರುವುದಿಲ್ಲ. ಸದರಿ ಮತ್ತೊಂದು ದೊಣ್ಣೆಯನ್ನು ನ್ಯಾಯಾಲಯದ ಗುರುತಿಗಾಗಿ **ಮುದ್ದೆಮಾಲು–2** ಎಂದು ಗುರುತಿಸಲಾಯಿತು.

ಸಾಕ್ಷಿಯು ಎರಡು ಫೋಟೋಗಳನ್ನು ನೋಡಿ ತಾನು ಇರುವುದರ ಬಗ್ಗೆ ಗುರುತಿಸಿರುತ್ತಾರೆ. ಸದರಿ ಫೋಟೊಗಳನ್ನು **ನಿ.ಪಿ–6 ಮತ್ತು ನಿ.ಪಿ–7** ಎಂದು ಗುರುತಿಸಲಾಯಿತು. ಸದರಿ ಫೋಟೋಗಳನ್ನು ಎಲ್ಲಿ ತೆಗೆದಿರುತ್ತಾರೆಂದು ತಿಳಿದಿರುವುದಿಲ್ಲ. ನಾನು ಧರಿಸಿದ ಬಟ್ಟೆಗೆ ರಕ್ತವಾಗಿರುತ್ತದೆ, ಅದನ್ನು ಆಸ್ಪತ್ರೆಯಲ್ಲಿ ತೆಗೆದುಕೊಂಡಿರುತ್ತಾರೆ. ಸದರಿ ಬಟ್ಟೆಯನ್ನು ನೋಡಿದರೆ ಗುರುತಿಸುತ್ತೇನೆ.

**(ಸರ್ಕಾರಿ ಅಭಿಯೋಜಕರು ಅಮಾನತ್ತು ಪಡಿಸಿಕೊಂಡಿರುವ ವಸ್ತುವನ್ನು ಗುರುತಿಸಲು ಅನುಮತಿ ಕೋರಿದ್ದು, ಸದರಿ ಅಮಾನತ್ತು ಪಡಿಸಿಕೊಂಡ ವಸ್ತುವನ್ನು ಬಿಳಿ ಬಟ್ಟೆ ಚೀಲದಲ್ಲಿ ಸೀಲ್ ಆಗಿದ್ದು, ಅದನ್ನು ತೆರೆದ ನ್ಯಾಯಾಲಯದಲ್ಲಿ ಅದನ್ನು ತೆರೆದು ಸಾಕ್ಷಿಗೆ ತೋರಿಸಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

ಒಂದು ಬಿಸ್ಕೇಟ್ ಬಣ್ಣದ ತುಂಬು ತೋಳಿದ ಜುಬ್ಬ ವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು **ಮುದ್ದೆಮಾಲು–3** ಎಂದು ಗುರುತಿಸಲಾಯಿತು.

ಪೊಲೀಸರು ನನ್ನ ಯಾವುದೇ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ ಹಾಗೂ ಯಾವುದೇ ಆಡಿಯೋ ವಿಡಿಯೋ ಚಿತ್ರೀಕರಣ ಮಾಡಿರುವುದಿಲ್ಲ. ಸಾಕ್ಷಿಯು ಮತ್ತೊಂದು ಫೋಟೋವನ್ನು ನೋಡಿ ತಾನು ಇರುವುದರ ಬಗ್ಗೆ ಗುರುತಿಸಿರುತ್ತಾರೆ. ಸದರಿ ಫೋಟೋವನ್ನು **ನಿ.ಪಿ–8** ಎಂದು ಗುರುತಿಸಲಾಯಿತು. ಸದರಿ ಫೋಟೋವನ್ನು ಪೊಲೀಸ್ ಠಾಣೆಯಲ್ಲಿ ತೆಗೆದಿರುತ್ತಾರೆ. ನಾನು ಎಂಟನೇ ತರಗತಿಯವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ಸದರಿ ನಾನು ಸಹಿ ಮಾಡಿರುವ ದಾಖಲಾತಿಗಳಿಗೆ ಓದಿ ತಿಳಿದುಕೊಂಡು ಸಹಿ ಮಾಡಿರುವುದಿಲ್ಲ. ಸದರಿ ದಾಖಲಾತಿಗಳಿಗೆ ಸಹಿ ಪಡೆಯುವ ಮೊದಲು ಅದನ್ನು ಓದಿ ಹೇಳಿ ನನ್ನ ಸಹಿ ಪಡೆದಿರುವುದಿಲ್ಲ. ಪೊಲೀಸರು ಸಹಿ ಮಾಡಲು

ಹೇಳಿದ್ದು, ನಾನು ಸಹಿ ಮಾತ್ರ ಮಾಡಿರುತ್ತೇನೆ 1 ನೇ ಆರೋಪಿತನನ್ನು ಹೊರತುಪಡಿಸಿ 2 ರಿಂದ 4 ಆರೋಪಿತರನ್ನು ನಾನು ಎಲ್ಲಿಯೂ ನೋಡಿರುವುದಿಲ್ಲ, ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡಿರುತ್ತೇನೆ.

**(ಈ ಹಂತದಲ್ಲಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಸರ್ಕಾರಿ ಅಭಿಯೋಜಕರು ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಗಿದೆ.)**

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ನಾನು ದಿಃ 06.11.2024 ರಂದು ತಿಪಟೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಕಾಲಕ್ಕೆ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯಲ್ಲಿ ನಾನು ನನ್ನ ಸ್ನೇಹಿತ ಮುಸ್ತಫ ರವರಿಂದ 25 ಸಾವಿರ ಹಣ ಪಡೆದಿದ್ದು, ಪ್ರತಿ ತಿಂಗಳು 2,500/- ಹಣವನ್ನು ಕೊಡುತ್ತಿದ್ದೆನು. ದಿಃ 06.11.2024 ರಂದು ಮಧ್ಯಾಹ್ನ ಸುಮಾರು 2.30 ಗಂಟೆಯ ಸಮಯದಲ್ಲಿ ನಾನು ಐ.ಬಿ ಸರ್ಕಲ್ ಬಳಿ ಇದ್ದಾಗ ವೇದ ನನ್ನ ಬಳಿ ಬಂದು ನನಗೆ ಹಣ ಬೇಕೆಂದು ಕೇಳಿದ, ನಾನು ಹಣವಿಲ್ಲ ಎಂದು ಹೇಳಿದೆ. ಪಾರ್ಕಿನ ಬಳಿ ಮಾತಾಡೋಣ ಬಾ ಎಂದು ಕರೆದುಕೊಂಡು ಬಂದನು. ನಾನು ಪಾರ್ಕಿನ ಬಳಿ ಬರುವುದಿಲ್ಲ ಎಂದು ಹೇಳಿ, ಪೋಲೀಸ್ ಠಾಣೆಗೆ ಹೋಗೋಣ ಎಂದು ಹೇಳಿ ಗ್ರಾಮಾಂತರ ಪೊಲೀಸ್ ಠಾಣೆಗೆ ಬೆಳಗ್ಗೆ ಬಂದೆನು, ವೇದ ಸ್ಟೇಷನ್ ಬಳಿ ಬಂದು ನಿಮ್ಮವರು ಆಚೆ ನಿಂತಿದ್ದಾರೆ ಬಾ ಎಂದು ಕರೆದನು. ನಾನು ಸ್ಟೇಷನ್ ನಿಂದ ಬಂದ ನಂತರ ವೇದ ನನ್ನನ್ನು ಪಾರ್ಕಿಗೆ ಕರೆದುಕೊಂಡು ಬಂದನು. ಪಾರ್ಕಿನಲ್ಲಿ ಮಂಜು ಹಾಗೂ ಮಂಜನ ತಮ್ಮ ಇದ್ದರು. ಸುಮಾರು 2.45 ಗಂಟೆಯ ಸಮಯದಲ್ಲಿ ಪಾರ್ಕಿನಲ್ಲಿ ನನಗೆ ಇಲ್ಲೇ ದುಡ್ಡು ಕೊಡು ಎಂದು ಕೇಳಿದ್ದು, ನಾನು ಇಲ್ಲ ಎಂದು

ಹೇಳಿದಾಗ ಮಂಜು ಮುಷ್ಠಿಯಿಂದ ನನ್ನ ಮುಖಕ್ಕೆ ಹೊಡೆದನು. ಮಂಜನ ತಮ್ಮ ಅಲ್ಲಿಯೇ ಬಿದ್ದಿದ್ದ ದೊಣ್ಣೆಯನ್ನು ತೆಗೆದುಕೊಂಡು ತಲೆಗೆ ಹೊಡೆದನು ಹಾಗೂ ಮದನ್ ಕಾಲಿನಿಂದ ಒದ್ದು ನನ್ನನ್ನು ಕೆಳಗೆ ಬೀಳಿಸಿದನು. ನಂತರ ಮೂರು ಜನರು ಕಾಲಿನಿಂದ ನನ್ನನ್ನು ಸಾಯಿಸುವುದಾಗಿ ಹೇಳಿ ಒದ್ದರು. ಅಷ್ಟರಲ್ಲಿ ಆ ಮಾರ್ಗದಲ್ಲಿ ಬಂದ ತಲಾಹ್ ಹಾಗೂ ಶಬ್ಬೂ ರವರು ಬಂದು ಜಗಳವನ್ನು ಬಿಡಿಸಿ ಆಸ್ಪತ್ರೆಗೆ ಹೋಗುವಂತೆ ಕಳುಹಿಸಿಕೊಟ್ಟಿರುತ್ತಾರೆ. ನಾನು ಚಿಕಿತ್ಸೆ ಪಡೆಯುವಾಗ ಪೊಲೀಸರಿಗೆ ಮೇಲೆ ಹೇಳಿದ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

ದಿಃ 10.11.2024 ರಂದು ನಾನು ಪೊಲೀಸರಿಗೆ ಮುಂದುವರೆದ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಆಸ್ಪತ್ರೆಯಿಂದ ಡಿಸ್ಚಾರ್ಜ್ ಆದ ನಂತರ ಠಾಣೆಗೆ ಹಾಜರಾಗಿ, ಮುಂದುವರೆದ ಹೇಳಿಕೆಯನ್ನು ನೀಡಿ ನನ್ನನ್ನು ಕೊಲೆ ಮಾಡುವ ಉದ್ದೇಶದಿಂದ ಪಾರ್ಕಿಗೆ ಕರೆದುಕೊಂಡು ಹೋಗಿ, ನನಗೆ ಹೊಡೆದವರ ಮೇಲೆ ಕಾನೂನು ಕ್ರಮ ಜರುಗಿಸಿ ಎಂದು ಮುಂದುವರದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

ನಂತರ ಅದೇ ದಿನ ದಿಃ 10.11.2024 ರಂದು ಪೊಲೀಸರು ಗಾಂಧೀ ಪಾರ್ಕಿನಲ್ಲಿ ಪಂಚನಾಮೆ ಜರುಗಿಸಲು ನನ್ನನ್ನು ಕರೆದಿದ್ದು, ನಾನು ಪೊಲೀಸರಿಗೆ ಕೃತ್ಯ ನಡೆದ ಸ್ಥಳವನ್ನು ತೋರಿಸಿದ್ದು, ಪೊಲೀಸರು ನನ್ನ ಹಾಗೂ ಪಂಚರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿ ಸ್ಥಳದಲ್ಲಿ ಬಿದ್ದಿದ್ದ ಎರಡು ದೊಣ್ಣೆಗಳನ್ನು ಹಾಗೂ ನಾನು

ಹಾಜರುಪಡಿಸಿದ ರಕ್ತದ ಕಲೆಯಾಗಿರುವ ಜುಬ್ಬ ಇವುಗಳನ್ನು ನನ್ನ ಹಾಗೂ ಪಂಚರ ಸಮಕ್ಷಮ ಅಮಾನತ್ತು ಪಡಿಸಿಕೊಂಡಿದ್ದು ಪ್ರತ್ಯೇಕವಾಗಿ ಪ್ಯಾಕ್ ಮಾಡಿ ಸೀಲ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು ಬೆಳಗ್ಗೆ 11.00–12.00 ಗಂಟೆಯವರೆಗೂ ಜರುಗಿಸಿದ್ದು, ಸದರಿ ಪಂಚನಾಮೆಗೆ ನಾನು ಹಾಗೂ ಪಂಚರು ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆಯ ಕಾಲಕ್ಕೆ ಪೊಲೀಸರು ನಿ.ಪಿ–6 ಮತ್ತು 7 ರಂತೆ ಪೋಟೋಗಳನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

ಪೊಲೀಸರು ನನ್ನ ಹೇಳಿಕೆಯನ್ನು ಪಡೆಯುವ ಕಾಲಕ್ಕೆ ನಿ.ಪಿ–8 ರಂತೆ ಪೋಟೋವನ್ನು ತೆಗೆದಿದ್ದು, ಸದರಿ ಹೇಳಿಕೆಯ ಆಡಿಯೋ ವಿಡಿಯೋ ಚಿತ್ರೀಕರಣ ಮಾಡಿರುತ್ತಾರೆ ಎಂದರೆ ಸರಿಯಲ್ಲ.

**(ಸರ್ಕಾರಿ ಅಭಿಯೋಜಕರು ಸಾಕ್ಷಿಯ ಆಡಿಯೋ–ವಿಡಿಯೋ ಸಿ.ಡಿಯನ್ನು ಪ್ಲೇ ಮಾಡಲು ಅನುಮತಿ ಕೋರಿದ್ದು, ಸದರಿ ಆಡಿಯೋ–ವಿಡಿಯೋ ಸಿ.ಡಿಯನ್ನು ಪ್ಲೇ ಮಾಡಲು ನ್ಯಾಯಾಲಯದಲ್ಲಿ ಯಾವುದೇ ಸಲಕರಣೆಗಳು ಇಲ್ಲದ ಕಾರಣ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.)**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).**

**ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ಒಪ್ಪಿರುತ್ತಾರೆ.**

**(ಹೇಮಂತ್ ಕುಮಾರ್ ಸಿ.ಆರ್)**
**5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ತಿಪಟೂರು**

**ಪ್ರಮಾಣೀಕರಿಸಿದ ದಿನಾಂಕಃ 16.07.2026.**

**<u>ಮುಂದುವರೆದ ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>**

**(ಸರ್ಕಾರಿ ಅಭಿಯೋಜಕರು ಕಡತದೊಂದಿಗೆ ಹಾಜರುಪಡಿಸಿರುವ ಡಿ.ವಿ.ಡಿ ಯನ್ನು ಪ್ಲೇ ಮಾಡಿ ನೋಡಲು ಕೋರಿದ್ದು, ಸದರಿ ಡಿ.ವಿ.ಡಿ ಯನು ಪ್ಲೇ ಮಾಡಲಾಗಿದ್ದು, ಅದರಲ್ಲಿ Video ಎಂಬ ಫೋಲ್ಡರ್ ಇದ್ದು, ಅದರಲ್ಲಿ 23 ಐಟಂಗಳು ಇದ್ದು, ಅದರಲ್ಲಿ 16 ಫೋಟಗಳು ಇದ್ದು, 7 ವಿಡಿಯೋಗಳು ಇರುತ್ತದೆ.)**

ಸದರಿ ವಿಡಿಯೋ ನಂ.VID20241110_093440.mp4 ಇದ್ದು ಅದನ್ನು ಪ್ಲೇ ಮಾಡಿ ನೋಡಲಾಗಿ ಅದರಲ್ಲಿ ಚಾಸಾ-1-ಸಿದ್ದೀಕ್ ರವರ ಆಡಿಯೋ ವಿಡಿಯೋ ಹೇಳಿಕೆ ಇರುತ್ತದೆ. ಸದರಿ ವಿಡಿಯೋ 6 ನಿಮಿಷ ಒಂದು ಸೆಕೆಂಡ್ ಇರುತ್ತದೆ. ಸದರಿ ಸಾಕ್ಷಿಯು ವಿಡಿಯೋವನ್ನು ನೋಡಿ ತಾನು ಇರುವುದಾಗಿ ಗುರುತಿಸಿದ್ದು, ಸದರಿ ವಿಡಿಯೋದಲ್ಲಿ ಕೇಳಿ ಬರುವ ಧ್ವನಿ ನನ್ನದಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಸಾಕ್ಷಿಯ ಡಿ.ವಿ.ಡಿ ಯನ್ನು **ನಿ.ಪಿ-12** ಎಂದು ಅದರಲ್ಲಿ ಸದರಿ ವಿಡಿಯೋ ನಂ.VID20241110_093440.mp4 ಅನ್ನು ನಿ.ಪಿ-12(ಎ) ಎಂದು ಗುರುತಿಸಲಾಯಿತು. ಸದರಿ ತನಿಖಾಧಿಕಾರಿಯ ಮುಂದೆ ನಾನೇ ಸ್ವಇಚ್ಚೆಯಿಂದ ಹೇಳಿಕೆಯನ್ನು ಆಡಿಯೋ ವಿಡಿಯೋ ಮುಖಾಂತರ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ವಿಡಿಯೋದಲ್ಲಿ ಇರುವ ಧ್ವನಿ ನನ್ನದೇ ಇದ್ದರು ಸಹಃ ನನ್ನದಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>(ಪಾಟೀ ಸವಾಲುಃ 1 ರಿಂದ 4 ನೇ ಆರೋಪಿತರ ಪರ ಶ್ರೀ. ಬಿ.ಜಿ.ಕೆ ವಕೀಲರು ಹಾಜರಿದ್ದು, ಯಾವುದೇ ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.)</u>**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ಒಪ್ಪಿರುತ್ತಾರೆ.

(ಹೇಮಂತ್ ಕುಮಾರ್ ಸಿ.ಆರ್)
5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತಿಪಟೂರು